ದಿನಾಂಕ:23-5-96ರ ಆದೇಶ ಸಂಖ್ಯೆ: ಲೋಇ 50 ಪಿಸಿಒ 95 ರಲ್ಲಿ ಹೆಚ್.ಡಿ.ಕೋಟೆ ಉಪ ವಿಭಾಗವು ನೀರಾವರಿ ಇಲಾಖೆಯ ದಿನಾಂಕ:29-5-96ರ ಆದೇಶ ಸಂಖ್ಯೆ:ನೀಇ 56 ಸನೀರಾ 95 ರನ್ವಯ ಇದು ಸಣ್ಣ ನೀರಾವರಿ ಉಪವಿಭಾಗವಾಗಿ ಕಾರ್ಯನಿರ್ವಹಿಸುತ್ತಿದೆ.

ಈ ಉಪ ವಿಭಾಗವನ್ನು ಹೆಚ್.ಡಿ.ಕೋಟೆಯಲ್ಲಿಯೇ ಮುಂದುವರಿಸಿ, ಹೆಚ್.ಡಿ.ಕೋಟೆ ತಾಲ್ಲೂಕಿನಲ್ಲಿರುವ ಸಣ್ಣ ನೀರಾವರಿ ಕಾಮಗಾರಿಗಳ ಅನುಷ್ಠಾನ ಮತ್ತು ನಿರ್ವಹಣೆಯನ್ನು ವಹಿಸಲು ನಿರ್ಧರಿಸಲಾಗಿದೆ.

ಇ) ಪ್ರಶ್ನೆ (ಅ) ಗೆ ನೀಡಿರುವ ಉತ್ತರದನ್ವಯ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹುಣಸೂರು ಕ್ಷೇತ್ರದ ಅಚ್ಚುಕಟ್ಟು ಪ್ರದೇಶಗಳ ದುರಸ್ಥಿ ಯೋಜನೆ

295 (595) ಶ್ರೀ ಸಿ.ಹೆಚ್. ವಿಜಯಶಂಕರ್ (ಹುಣಸೂರು) : ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಣಸೂರು ಕ್ಷೇತ್ರ ವ್ಯಾಪ್ತಿಯಲ್ಲಿ ಅತೀ ಹೆಚ್ಚು ಪ್ರಮಾಣದ ಅಚ್ಚುಕಟ್ಟು ಪ್ರದೇಶಗಳನ್ನು ಹೊಂದಿರುವ ಹನಗೂಡು, ಕಟ್ಟಮಳಲವಾಡಿ ನಾಲಾ ಮತ್ತು ಚಾಮರಾಜಾ ಬಲದಂಡೆ ನಾಲಾ ದುರಸ್ಥಿ ಕಾರ್ಯ ನಬಾರ್ಡ್ ಯೋಜನೆಯ ಸಹಾಯದಡಿಯಲ್ಲಿ ತೆಗೆದುಕೊಂಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಇನ್ನು ಎಷ್ಟು ದಿನಗಳಲ್ಲಿ ಹಣ ಒದಗಿಸಲಾಗುವುದು ಮತ್ತು ಯಾವಾಗ ದುರಸ್ಥಿ ಕಾರ್ಯ ಪ್ರಾರಂಭಿಸಲಾಗುವುದು ?

ಇ) ಸದರಿ ಯೋಜನೆಯ ಅಡಿಯಲ್ಲಿ ಹಣ ಒದಗಿಸಲಾಗದಿದ್ದರೆ, ಬೇರೆ ಯಾವ ರೂಪದಲ್ಲಿ ಹಣ ಒದಗಿಸಲಾಗುವುದು ಹಾಗೂ ದುರಸ್ಥಿ ಕಾರ್ಯ ಪ್ರಾರಂಭಿಸಲು ಕ್ರಮ ಜರುಗಿಸಲಾಗುವುದೇ ?

ಶ್ರೀ ಕೆ.ಎನ್. ನಾಗೇಗೌಡ (ಬೃಹತ್ ನೀರಾವರಿ ಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಪರ್ಯಾಯ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲಾ ಬಳಕೆದಾರರ ನ್ಯಾಯಾಲಯದಲ್ಲಿ ಖಾಲಿ ಇರುವ ಹುದ್ದೆಗಳು

296 (422) ಶ್ರೀ ಯೋಗೇಶ್ ಭಟ್ (ಮಂಗಳೂರು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲಾ ಬಳಕೆದಾರರ ನ್ಯಾಯಾಲಯದಲಲ್ಲಿ ಖಾಲಿಯಿರುವ ವೇದಿಕೆಗೆ ಸದಸ್ಯರ ಆಡಳಿತಾದಿಕಾರಿಗಳ ಹಾಗೂ ಸಿಬ್ಬಂಧಿಗಳ ಹುದ್ದೆಗಳು ಎಷ್ಟು? ಹಾಗೂ ರಾಜ್ಯದ ಇತರ ಜಿಲ್ಲೆಗಳ ಬಳಕೆದಾರರ ನ್ಯಾಯಾಲಯಗಳಲ್ಲಿರುವ ಹುದ್ದೆಗಳೆಷ್ಟು?

ಅ) ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲಾ ವೇದಿಕೆಯಲ್ಲಿ ಖಾಲಿ ಇರುವ ಸ್ಥಾನಗಳ ವಿವರ:

1) ಸದಸ್ಯರು - 1

2) ಸಹಾಯಕ ನೊಂದಣಾಧಿಕಾರಿ- 1

3) ಶೀಘ್ರ ಲಿಪಿಗಾರರು - 2

4) ವಾಹನ ಚಾಲಕ -1

ರಾಜ್ಯದ ಇತರ ಜಿಲ್ಲಾ ವೇದಿಕೆಗಳಿಗೆ ಮಂಜೂರಾಗಿರುವ ಹುದ್ದೆಗಳು:

1) ಸಹಾಯಕ ನೊಂದಣಾಧಿಕಾರಿ - 1

2) ಶಿರಸ್ತೆದಾರರು - 1

3) ಪ್ರಥಮ ದರ್ಜೆ ಸಹಾಯಕರು - 1

4) ದ್ವಿತೀಯ ದರ್ಜೆ ಸಹಾಯಕ - 1

5) ಶೀಘ್ರ ಲಿಪಿಗಾರರು - 2

6) ಗ್ರೂಪ್-ಡಿ - 3

7) ವಾಹನ ಚಾಲಕ - 1

ಆ) ದಕ್ಷಿಣ ಕನ್ನಡ ಜಿಲ್ಲಾ ವೇದಿಕೆಯ ಮಹಿಳಾ ಸದಸ್ಯರನ್ನು ಆಯ್ಕೆ ಸಮಿತಿಯಿಂದ ಹೆಸರು ವಾಪಸ್ಸು ಬಂದ ನಂತರ ಮಾಡಲಾಗುವುದು.

ಸಹಾಯಕ ನೋಂದಣಾಧಿಕಾರಿಗಳ ಹುದ್ದೆಯನ್ನು ಭರ್ತಿ ಮಾಡುವ ವಿಷಯವು ಪರಿಶೀಲನೆಯಲ್ಲಿದೆ. ಶೀಘ್ರ ಲಿಪಿಗಾರರ ಆಯ್ಕೆ ಪಟ್ಟಿಯು ಸ್ವೀಕೃತವಾಗಿದ್ದು ಅವರನ್ನು ನೇಮಿಸಲು ಶೀಘ್ರ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಅಧ್ಯಕ್ಷರು: ಮಂಡಿಸಲಾಯಿತು.

2) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಶೂನ್ಯವೇಳೆ

ಅ) ಶ್ರೀ ಸಭಾಪತಿಯವರ ಮೇಲೆ ಹೂಡಿರುವ ಮೊಕದ್ದಮೆಯನ್ನು ವಾಪಸ್ ಮಾಡಿಕೊಳ್ಳುವ ಬಗ್ಗೆ.